ಅಸಲು ದಾವಾ ನಂಃ13/2021
ಪಿ ಡಬ್ಲ್ಯುಃ 1

<u>ದಿನಾಂಕಃ **01-08-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ **10** ರವರ ಪರ ಶ್ರೀ ಬಿ ಎಸ್ ಎನ್ ವಕೀಲರಿಂದಃ</u>

ನಾನು ಸಿವಿಲ್ ನ್ಯಾಯಾಲಯ ಕೊಪ್ಪದಲ್ಲಿ ನಾಗರಾಜು ಮತ್ತು ಇತರರ ವಿರುದ್ಧ ಮೂಲ ದಾವೆ ಸಂಖೆ 02/2021 ಎಂದು ದಾವೆ ಹೂಡಿರುತ್ತೇನೆ ಎಂದರೆ ಸರಿ. ನಾನು ನನ್ನ ತಾತ ಬರೆದ ವಿಲ್ ನ ದೃಢಿಕೃತ ಪ್ರತಿಯನ್ನು ಸದರಿ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಸದರಿ ವಿಲ್ ನ ಮೂಲ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿಕೊಂಡಿದ್ದು ಅದನ್ನು ನಿಡಿ- 1 ಎಂದು ಗುರುತಿಸಲಾಯಿತು. ನಿಡಿ- 1 ರಲ್ಲಿ ಬರೆದ ವಿಚಾರಗಳನ್ನು ನಾನು ಒಪ್ಪಿಕೊಳ್ಳುತ್ತೇನೆ ಎಂದರೆ ಸರಿ. ನಾನು ದಾವೆ ಹೂಡಿರುವ ನಾಗರಾಜು ಇವರು ನನಗಿಂತ ವಯಸ್ಸಿನಲ್ಲಿ ಒಂದು ತಿಂಗಳು ದೊಡ್ಡವರು ಇರುತ್ತಾರೆ. ಸದರಿ ವ್ಯವಸ್ಥಾ ಪತ್ರದಲ್ಲಿ ನಾಗರಾಜು ಇವರು ಮೀನಾಕ್ಷಮ್ಮ ಇವರ ಮಗ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ನಿಡಿ- 1 ರಲ್ಲಿ ರಂಗಯ್ಯ ಬಾಯರಿ ಅವರಿಗೆ ಏನು ಆಸ್ತಿಗಳು ಇದ್ದು ಅವುಗಳನ್ನು ಸದರಿ ದಾಖಲೆಯನ್ನು ನಮೂದಿಸಲಾಗಿರುತ್ತದೆ ಎಂದರೆ ಸರಿ. ರಂಗಯ್ಯ ಬಾಯರಿ ತಮಗಿದ್ದ ಆಸ್ತಿಗಳನ್ನು ನಿಡಿ-1 ರ ಪ್ರಕಾರ ವಿಲೇವಾರಿ ಮಾಡಿರುತ್ತಾರೆ ಎಂದರೆ ಸರಿ. ನಾನು ನಿಡಿ- 1 ರ ಪತ್ರವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ.

2. ತುಳಸಮ್ಮ, ಮೀನಾಕ್ಷಿ, ಸಾವಿತ್ರಮ್ಮ ಮತ್ತು ಸೀತಮ್ಮ ಇವರ ನಡುವೆ 1978 ರಲ್ಲಿ ನೋಂದಾಯಿತ ವಿಭಾಗ ಪತ್ರ ಆಗಿರುತ್ತದೆ ಎಂದರೆ ಸರಿ. ನಿಡಿ- 1 ರ ದಾಖಲೆಯನ್ನು ಆಧರಿಸಿ 1978 ರಲ್ಲಿ ವಿಭಾಗ ಪತ್ರವನ್ನು ಬರೆಯಲಾಗಿರುತ್ತದೆ ಎಂದರೆ ಸರಿ. ನಿಡಿ- 1 ರಲ್ಲಿ ತುಳಸಮ್ಮ ಇವರಿಗೆ ಮಕ್ಕಳಿಲ್ಲದ ಕಾರಣ ಅವರು ತೀರಿಕೊಂಡ ನಂತರ ಸದರಿ ಮನೆಯಲ್ಲಿ ಯಾರು ವಾಸ ಇದ್ದು ದೇವತಾ ಕಾರ್ಯಗಳನ್ನು ಮಾಡುತ್ತಾರೋ ಅವರಿಗೆ ತುಳಸಮ್ಮ ಆಸ್ತಿ ಹೋಗಬೇಕು ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ ಸಾಕ್ಷಿ ಮುಂದುವರೆದು ನಾನು ಆ ಮನೆಯಲ್ಲಿ ಇದ್ದೆವು ಮತ್ತು ಅವರು ನೋಡಿಕೊಂಡಿದ್ದೆವು ಎಂದು ಉತ್ತರಿಸುತ್ತಾರೆ. ನಾನು ಸಾವಿತ್ರಮ್ಮನವರ ಮಗನಾಗಿದ್ದರೆ ನನ್ನ ಹೆಸರನ್ನು ರಂಗಯ್ಯ ಬಾಯರಿ ಇವರು ನಿಡಿ- 1 ರಲ್ಲಿ ಬರೆಯುತ್ತಿದ್ದರು ಎಂದರೆ ಸಾಕ್ಷಿ ನಿಡಿ- 1 ರಲ್ಲಿ

ಸಾವಿತ್ರಮ್ಮನವರ ಇಬ್ಬರು ಮಕ್ಕಳು ಎಂದು ಬರೆದಿದ್ದು ಆದರೆ ಹೆಸರನ್ನು ಬರೆಯಲಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ- 1 ರಲ್ಲಿ ಸಾವಿತ್ರಮ್ಮ ಇವರು ಶಿವಮೊಗ್ಗದ ರಾಮ ಅಡಿಗ ಇವರ ಜೊತೆ ಮದುವೆ ಮಾಡಿಕೊಂಡು ಸಂಸಾರದಲ್ಲಿ ಸುಖವಾಗಿ ಇರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾವಿತ್ರಮ್ಮ ಇವರಿಗೆ ಮಕ್ಕಳು ಇದ್ದರೆ ಅವರ ಹೆಸರನ್ನು ನಿಡಿ- 1 ರಲ್ಲಿ ಬರೆಯುತ್ತಿದ್ದರು ಎಂದರೆ ಸಾಕ್ಷಿ ಅವರು ಸುಖವಾಗಿದ್ದ ಕಾರಣ ಬರೆದಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ- 1 ಬರೆಯುವ ಕಾಲಕ್ಕೆ ಸೀತಮ್ಮ ಇವರಿಗೆ ಮದುವೆ ಆಗಿರಲಿಲ್ಲ ಎಂದರೆ ಸರಿ. ನಾನು ಸಾವಿತ್ರಮ್ಮನವರ ಮಗ ಇರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ಸಾವಿತ್ರಮ್ಮ ಇವರ ಮಗ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ ಸಾಕ್ಷಿ ಮುಂದುವರೆದು ಶಾಲೆಯಲ್ಲಿ ತಂದೆಯ ಹೆಸರನ್ನು ಮಾತ್ರ ಬರೆಯುತ್ತಿದ್ದರು ನನ್ನ ತಾಯಿಯ ಚುನಾವಣಾ ಗುರುತಿನ ಚೀಟಿ ಇರುತ್ತದೆ ಎಂದು ಉತ್ತರಿಸುತ್ತಾರೆ. ನನಗೆ ನನ್ನ ತಂದೆ ಕಡೆಯಿಂದ ಬಂದ ಆಸ್ತಿಗಳು ಶಿವಮೊಗ್ಗದಲ್ಲಿ ಇದ್ದವು ಅವುಗಳನ್ನು ಈಗ ಮಾರಾಟ ಮಾಡಲಾಗಿರುತ್ತದೆ. ಸದರಿ ಆಸ್ತಿಗಳನ್ನು ನಮ್ಮ ತಂದೆಯ ತಮ್ಮಂದಿರು ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿಗಳನ್ನು 2007 ರಲ್ಲಿ ರಾಮಲಿಂಗ ರೆಡ್ಡಿ ಇವರಿಗೆ ಮಾರಾಟ ಮಾಡಲಾಗಿರುತ್ತದೆ. ಸದರಿ ಆಸ್ತಿಗಳು ಮೂಲತಃ ನಮ್ಮ ಅಜ್ಜನ ಆಸ್ತಿ ಇರುತ್ತದೆ. ಸದರಿ ರಾಮಲಿಂಗ ರೆಡ್ಡಿ ಇವರಿಗೆ ಮಾರಾಟ ಮಾಡಿದ ಆಸ್ತಿಗಳ ಕ್ರಯ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಕ್ರಯ ಪತ್ರದಲ್ಲಿ ನಮ್ಮ ತಂದೆ ತಾಯಿ ಮರಣ ಹೊಂದಿದ್ದು ಅವರ ವಾರಸುದಾರರು ಎಂದು ನನ್ನ ಹೆಸರು ನಮೂದು ಮಾಡಿರುತ್ತಾರೆ. 2007 ರಲ್ಲಿ ನಮ್ಮ ಕುಟುಂಬದ ವಂಶವೃಕ್ಷವನ್ನು ತಯಾರಿಸಲಾಗಿರುತ್ತದೆ. ನಾನು ಸದರಿ ವಂಶವೃಕ್ಷವನ್ನು ಈ ದಾವೆಯಲ್ಲಿ ಮತ್ತು ಇನ್ನೊಂದು ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಸಾಕ್ಷಿ ಮುಂದುವರೆದು ನಮ್ಮ ಅಣ್ಣ ತಮ್ಮಂದಿರ ವಂಶವೃಕ್ಷದ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ವಂಶವೃಕ್ಷವನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ರಾಮಚಂದ್ರ ಅಡಿಗ ಇವರ ಮರಣ ಪ್ರಮಾಣ ಪತ್ರದಲ್ಲಿ ಸಾವಿತ್ರಮ್ಮ ಇವರ ಹೆಸರನ್ನು ಕಲಂ ನಂ 7 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ಆ ಕಾಲಕ್ಕೆ ನಮ್ಮ ತಾಯಿ ಬದುಕಿದ್ದು ಅವರು ಹೆಸರನ್ನು ನಮೂದಿಸಿರುವುದಿಲ್ಲ ಮತ್ತು ನಮ್ಮ ತಾಯಿಯ ಮರಣ

ಪ್ರಮಾಣ ಪತ್ರದಲ್ಲಿ ರಾಮಚಂದ್ರ ಅಡಿಗ ಇವರ ಹೆಸರನ್ನು ನಮೂದು ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಎಸ್.ಆರ್.ದತ್ತಾತ್ರಿ ನನ್ನ ಎರಡನೆ ತಮ್ಮ ಇರುತ್ತಾರೆ. ಸದರಿಯವರು ಮರಣ ಪ್ರಮಾಣ ಪತ್ರದಲ್ಲಿ ತಾಯಿಯ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಾನು ಮತ್ತು ದತ್ತಾತ್ರಿ ಸಾವಿತ್ರಮ್ಮ ಇವರ ಮಕ್ಕಳು ಇರುವುದಿಲ್ಲ ಎಂದರೆ ಸರಿಯಲ್ಲ. ಸಾವಿತ್ರಮ್ಮ ಇವರಿಗೆ ಯಾವುದೇ ಸಂತತಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸಾವಿತ್ರಮ್ಮ ಇವರ ಮಕ್ಕಳಿದ್ದರೆ ಅದಕ್ಕೆ ಪೂರಕವಾಗಿ ನ್ಯಾಯಾಲಯಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಆದ ಕಾರಣ ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ರಿಂದ 5 ತರಗತಿಯನ್ನು ಬಿ.ಬಿಸ್ಟ್ರೀಟ್ ಶಾಲೆ ಶಿವಮೊಗ್ಗದಲ್ಲಿ ಓದಿರುತ್ತೇನೆ. ನಾನು 1 ರಿಂದ 5 ನೇ ತರಗತಿಯನ್ನು ವಿದ್ಯಾಭ್ಯಾಸ ಮಾಡಿದ ಬಗ್ಗೆ ಶಾಲಾ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನಾನು ಸಾವಿತ್ರಮ್ಮನವರ ಮಗ ಎಂದು ತೋರಿಸಲು ಯಾವುದೇ ಶಾಲಾ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

5. ದಾವಾ ಸ್ವತ್ತು-1 ನಾಗರಾಜು ಇವರ ತಾಯಿ ತುಳಸಮ್ಮ ಮತ್ತು ಮೀನಾಕ್ಷಿ ಇವರಿಗೆ 1978 ರಲ್ಲಿ ವಿಭಾಗ ಪತ್ರದಲ್ಲಿ ಅವರ ಭಾಗಕ್ಕೆ ಆಸ್ತಿ ಬಂದಿರುತ್ತದೆ ಎಂದರೆ ಸರಿ. ದಾವಾ ಸ್ವತ್ತು -2 1978 ರ ವಿಭಾಗ ಪತ್ರದಲ್ಲಿ ತುಳಸಮ್ಮ, ಮೀನಾಕ್ಷಿ, ಸಾವಿತ್ರಮ್ಮ ಮತ್ತು ಸೀತಮ್ಮ ಇವರಿಗೆ ಬಂದ ಆಸ್ತಿಗಳು ಇರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅವರಿಗೆ ಜಂಟಿಯಾಗಿ ಬಂದಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ದಾವಾ ಸ್ವತ್ತು 2 ನ್ನು 11 ನೇ ಪ್ರತಿವಾದಿ ಕಮಲಾಕ್ಷಮ್ಮ ಇತರರ ಕಡೆಯಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಜಂಟಿಯಾಗಿ ಖರೀದಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು 3 ನ್ನು 12 ನೇ ಪ್ರತಿವಾದಿ ನಿಪಿ- 15 ರಂತೆ ಕಮಲಾಕ್ಷಮ್ಮ ಇತರರ ಕಡೆಯಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಜಂಟಿಯಾಗಿ ಖರೀದಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. 1978 ರಲ್ಲಿ ಸಾವಿತ್ರಮ್ಮ, ಮೀನಾಕ್ಷಿ, ತುಳಸಮ್ಮ ಮತ್ತು ಸೀತಮ್ಮ ಇವರ ನಡುವೆ ಆದ ವಿಭಾಗ ಪತ್ರದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿ. ಸದರಿ ವಿಭಾಗ ಪತ್ರವನ್ನು ಪ್ರಶ್ನೆ ಮಾಡಿ ಯಾವುದಾದರು ದಾವೆ ಹೂಡಿದ್ದೀರ ಎಂದರೆ ಸಾಕ್ಷಿ ನಮ್ಮ ತಂದೆ ಚಿಕ್ಕಮಗಳೂರು ನ್ಯಾಯಾಲಯದಲ್ಲಿ ವಿಭಾಗ ಆಗುವ ಪೂರ್ವದಲ್ಲಿ ದಾವೆ ಹೂಡಿದ್ದರು ನಂತರ ರಾಜಿ ಮಾಡಿಕೊಂಡು ನಮ್ಮ ತಾಯಿಯ

ಆಸ್ತಿಯನ್ನು ತುಳಸಮ್ಮ ಇವರಿಗೆ ರೂ.20,000/- ಹಣಕ್ಕೆ ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ರಾಜಿ ನ್ಯಾಯಾಲಯದ ಹೊರಗಡೆ ಆಗಿರುತ್ತದೆ. ಸದರಿ ದಾವೆಯನ್ನು ನನ್ನ ತಂದೆ ಮತ್ತು ತಾಯಿ ಹೂಡಿದ್ದರು. ಸದರಿ ದಾವೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸಾವಿತ್ರಮ್ಮ ಇವರಿಗೆ ಹಿಸ್ಸೆ ಕೊಟ್ಟ ನಂತರ ಸೀತಮ್ಮ, ಲಲಿತ, ನಾಗರಾಜು, ರಂಗಸ್ವಾಮಿ, ರವೀಂದ್ರ, ಪ್ರೇಮ ಇವರುಗಳು ಹಿಸ್ಸಾ ಕೋರಿ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಅವರವರೇ ಸೇರಿಕೊಂಡು ದಾವೆ ಹೂಡಿ ರಾಜಿ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ 10 ರಿಂದ 12 ರವರು ಎಲ್ಲಾ ದಾಖಲೆಗಳನ್ನು ಪರಶೀಲಿಸಿ ವಿವೇಚನೆಯಿಂದ ದಾವಾ ಸ್ವತ್ತು 1 ರಿಂದ 3 ನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಮುಂದುವರೆದು ನಮಗೆ ತಿಳಿಸದೇ ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ 1 ರಿಂದ 09 ರವರು ದಾವಾ ಸ್ವತ್ತು 1 ರಿಂದ 3 ರ ಸಂಪೂರ್ಣ ಮಾಲೀಕರಿದ್ದು ಸದರಿ ಆಸ್ತಿಗಳನ್ನು ಪ್ರತಿವಾದಿ 10 ರಿಂದ 12 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾವೆ ಆಸ್ತಿಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಾವಿತ್ರಮ್ಮ ನವರ ಮಗ ಇಲ್ಲದೇ ಇದ್ದರೂ ನಾನು ದುರುದ್ದೇಶದಿಂದ ಭಾಗ ಪಡೆಯುವ ಸಲುವಾಗಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಿಂದೂ ವಾರಸು ಕಾಯ್ದೆಯ ಪ್ರಕಾರ ಸಾವಿತ್ರಮ್ಮರವರ ವಾರಸುದಾರ ಇಲದೆ ಇದ್ದ ಕಾರಣ ನನಗೆ ಭಾಗ ಕೇಳಲು ಯಾವುದೇ ಹಕ್ಕು ಅಧಿಕಾರ ದಾವಾ ಆಸ್ತಿಗಳ ಮೇಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ರಂಗಯ್ಯ ಬಾಯರಿ ಇವರು ಮಾಡಿದ ದಾಖಲೆ ಬಗ್ಗೆ ನ್ಯಾಯಾಲಯದಲ್ಲಿ ರಾಜಿ ಆಗಿರುವ ಬಗ್ಗೆ ಗೊತ್ತಿದ್ದರು ಸಹ ಸದರಿ ವಿಚಾರವನ್ನು ಮರೆಮಾಚಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ವಿಚಾರಗಳನ್ನು ನಮೂದಿಸಿ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಪ್ರತಿವಾದಿ **13** ರ ರ ಪರ ಶ್ರೀ ವಿ ಆರ್ ಎಸ್ ವಕೀಲರಿಂದಃ

ನನ್ನ ತಂದೆಯ ಹೆಸರು ರಾಮಚಂದ್ರಯ್ಯ ಇರುವುದಿಲ್ಲ ಆದರೆ ರಾಮಚಂದ್ರ ಅಡಿಗ ಇರುತ್ತದೆ. ನಿಮ್ಮ ತಂದೆ ರಾಮಚಂದ್ರಯ್ಯ ಇರುವುದಿಲ್ಲ ರಾಮಚಂದ್ರ ಅಡಿಗ ಎಂದರೆ ಸಾಕ್ಷಿ

ಊರಲ್ಲಿ ನಮ್ಮ ತಂದೆಗೆ ರಾಮಚಂದ್ರ ಅಡಿಗ ಎಂದು ಕರೆಯುತ್ತಿದ್ದರು ಮತ್ತು ನಮ್ಮ ತಾತನ ಮನೆಯಲ್ಲಿ ನಮ್ಮ ತಂದೆಗೆ ರಾಮಯ್ಯ ಎಂದು ಕರೆಯುತ್ತಿದ್ದರು. ರಾಮಚಂದ್ರ ಹಾಗೂ ರಾಮಚಂದ್ರ ಅಡಿಗ ನಮ್ಮ ತಂದೆ ಇದ್ದು ರಾಮಚಂದ್ರಯ್ಯ ಮತ್ತು ರಾಮ ಅಡಿಗ ನಮ್ಮ ತಂದೆ ಇರುವುದಿಲ್ಲ. ನಿಪಿ- 12 ರಲ್ಲಿ ಸಾವಿತ್ರಮ್ಮ ಇವರ ಗಂಡ ರಾಮಚಂದ್ರಯ್ಯ ಎಂದು ನಮೂದ ಇರುತ್ತದೆ ಎಂದರೆ ಸಾಕ್ಷಿ ಬರೆಯುವವರು ತಪ್ಪಾಗಿ ಬರೆದಿರುಬಹುದು ಎಂದು ಉತ್ತರಿಸುತ್ತಾರೆ. ನಾನು ಈ ದಾವೆಯಲ್ಲಿ ಸದರಿ ವಿಚಾರವನ್ನು ತಪ್ಪಾಗಿ ಬರೆದಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ಸಾವಿತ್ರಮ್ಮನ ಗಂಡ ರಾಮಚಂದ್ರಯ್ಯ ಎಂದರೆ ಸರಿಯಲ್ಲ.

2. ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಈಗ ಬೆಂಗಳೂರಿನಲ್ಲಿ 5 ವರ್ಷಗಳಿಂದ ವಾಸ ಇರುತ್ತೇನೆ. ನಾನು ಶಿವಮೊಗ್ಗದಲ್ಲಿ 1956 ರಿಂದ 2019 ರವರೆಗೆ ಶಿವಮೊಗ್ಗದಲ್ಲಿ ವಾಸ ಇದ್ದೆನು. ನಾನು ಹರಿಹರಪುರದ ನನ್ನ ಅಜ್ಜನಾದ ರಂಗಯ್ಯ ಬಾಯರಿ ರಜೆ ಇದ್ದಾಗ ಅವರ ಮನೆಗೆ ಬರುತ್ತಿದ್ದೆ. ನನ್ನ ತಂಗಿ ಭಾಗ್ಯಲಕ್ಷ್ಮಿ ಶಿವಮೊಗ್ಗದಲ್ಲಿ ಓದಿರುತ್ತಾರೆ. ನನ್ನ ತಂಗಿ 6 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತಾರೆ. ಈ ದಾವೆಯಲ್ಲಿ 9 ನೇ ಪ್ರತಿವಾದಿ ನನ್ನ ತಂಗಿಯನ್ನು ಅವಳು ಮುಗ್ದಳಿದ್ದು ಉಳಿದ ಪ್ರತಿವಾದಿಯರ ಬಳಿ ಹಣ ಪಡೆದುಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಹಣವನ್ನು 1 ರಿಂದ 3 ನೇ ಪ್ರತಿವಾದಿಯ ಬಳಿ ಪಡೆದುಕೊಂಡಿರುತ್ತಾರೆ. ನಾನು ಈ ದಾವೆ ಸಲ್ಲಿಸಿದ ನಂತರ ಸಿವಿಲ್ ನ್ಯಾಯಾಲಯ ಕೊಪ್ಪದಲ್ಲಿ ಇನ್ನೊಂದು ದಾವೆ ಹೂಡಿರುತ್ತೇನೆ ಎಂದರೆ ಸರಿ. ಮೂಲ ದಾವೆ ಸಂಖ್ಯೆ 02/2021 ರಲ್ಲಿ ನನ್ನ ತಂಗಿ 5 ನೇ ವಾದಿ ಇರುತ್ತಾರೆ ಎಂದರೆ ಸರಿ.

3. ತುಳಸಮ್ಮ ಇವರ ಗಂಡ ಅನಂತಯ್ಯ ಇದ್ದು ಅವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಅವರ ಮಕ್ಕಳು ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸೀತಮ್ಮ ಇವರ ಗಂಡ ಸೀತರಾಮಯ್ಯ ಇವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಇರುತ್ತಾರೆ ಎಂದರೆ ಸಾಕ್ಷಿ ತಂಗಿ ಇರುವುದು ಗೊತ್ತು ಆದರೆ ಅಣ್ಣ ತಮ್ಮಂದಿರ ಬಗ್ಗೆ ಗೊತ್ತಿರುವುದಿಲ್ಲ. ನಾನು ತುಳಸಮ್ಮ ಇವರ ಸಂಬಂಧಿಕರು ಇಲ್ಲದೇ ಇರುವ ಕಾರಣ ಅವರ ಸಂಬಂಧಿಕರ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ

ಎಂದರೆ ಸರಿ. ನನ್ನ ತಾಯಿಯ ಆಸ್ತಿಯನ್ನು ಪರಭಾರ ಮಾಡಿದ ಕಾರಣ ಹಾಗೂ ತುಳಸಮ್ಮ ಇವರಿಗೆ ವಾರಸುದಾರರು ಇಲ್ಲದ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ. ಸಾವಿತ್ರಮ್ಮ ಇವರು 1995 ರಲ್ಲಿ ತೀರಿಕೊಂಡಿರುತ್ತಾರೆ. ಸಾವಿತ್ರಮ್ಮ ಇವರು ತೀರಿಕೊಂಡ ನಂತರ ಖಾತೆ ಬದಲಾವಣೆ ಮಾಡುವಂತೆ ನಾನು ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ. ಖಾತೆ ಬದಲಾವಣೆ ಮಾಡಬೇಕಾದರೆ ವಂಶವೃಕ್ಷದ ಪ್ರಮಾಣ ಪತ್ರ ಕೊಡಬೇಕಾಗುತ್ತದೆ ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಗಳಲ್ಲಿ ಪಾಲು ಕೇಳಬೇಕಾದರೆ ವಂಶವೃಕ್ಷದ ಪ್ರಮಾಣ ಪತ್ರ ಬೇಕು ಎಂದರೆ ಸರಿ. ನಾನು ಈ ದಾವೆಯಲ್ಲಿ ವಂಶವೃಕ್ಷದ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ವಂಶವೃಕ್ಷದ ಪ್ರಮಾಣ ಪತ್ರವನ್ನು ತಹಶೀಲ್ದಾರ್ ರವರು ನೀಡುತ್ತಾರೆ ಎಂದರೆ ಸರಿ. ನಾನು ತಹಶೀಲ್ದಾರವರ ಬಳಿ ವಂಶವೃಕ್ಷ ಪ್ರಮಾಣ ಪತ್ರ ಪಡೆಯದ ಕಾರಣ ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಸಾವಿತ್ರಮ್ಮನವರ ಮಗ ಇಲ್ಲದ ಕಾರಣ ವಂಶವೃಕ್ಷದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಸಾವಿತ್ರಮ್ಮನವರ ಮರಣ ಪ್ರಮಾಣ ಪತ್ರದಲ್ಲಿ ಗಂಡನ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ನಾನು ಸಾವಿತ್ರಮ್ಮ ಇವರ ಮರಣ ಪ್ರಮಾಣ ಪತ್ರವನ್ನು ದಿನಾಂಕ 21.01.2021 ರಂದು ಪಡೆದಿರುತ್ತೇನೆ ಎಂದರೆ ಸರಿ. ನಾನು, ದತ್ತಾತ್ರಿ ಮತ್ತು ಭಾಗ್ಯಲಕ್ಷ್ಮಿ ಇವರು ಸಾವಿತ್ರಮ್ಮನವರ ಮಕ್ಕಳು ಇರುವುದಿಲ್ಲ ಎಂದರೆ ಸರಿಯಲ್ಲ. ಸಾವಿತ್ರಮ್ಮ ಇವರು ಮಕ್ಕಳು ಇಲ್ಲದೆ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾಯಿ ಸರ್ವೆ ನಂಬರ್ ನಂಬರ್ 291 ರಲ್ಲಿ 4 ಎಕರೆ 4 ಗುಂಟೆ 1984 ರಲ್ಲಿ ಮಂಜೂರಾಗಿರುತ್ತದೆ. ಸದರಿ ಜಮೀನು ಕಾಡು ಇರುತ್ತದೆ. 1982 ರಲ್ಲಿ ಸಾವಿತ್ರಮ್ಮ ಇವರು ತಮ್ಮ ಗಂಡನನ್ನು ಬಿಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ಮಂಜೂರಾಗುವ ಕಾಲಕ್ಕೆ ಅವರ ಗಂಡ ಇರಲಿಲ್ಲ ಎಂದರೆ ಸರಿಯಲ್ಲ. ತುಳಸಮ್ಮ, ಸೀತಮ್ಮ, ಸಾವಿತ್ರಮ್ಮ ಇವರಿಗೂ ಸಹ ತಲಾ 4 ಎಕರೆ ಜಮೀನು ಮಂಜೂರಾಗಿರುತ್ತದೆ. ಸದರಿಯವರ ಗಂಡ ಬಿಟ್ಟು ಹೋದ ಕಾರಣ ಜಮೀನು ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ.

5. ಸರ್ವೆ ನಂಬರ್ 290 4 ಎಕರೆ ಜಮೀನು ತುಳಸಮ್ಮ ಇವರಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿ. ತುಳಸಮ್ಮ ಇವರನ್ನು ಜೆ.ಟಿ.ನಾಗರಾಜು (ಮೀನಾಕ್ಷಮ್ಮ ಇವರ ಮಗ) ಇವರು ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಎಲ್ಲಾರು ಕೊನೆಗಾಲದಲ್ಲಿ ನೋಡಿಕೊಂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಮೂಲ ದಾವೆ ಸಂಖ್ಯೆ 20/2005 ರ ರಾಜಿ ಅರ್ಜಿಯಲ್ಲಿ ಸೀತಮ್ಮ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ರಾಜಿ ಅರ್ಜಿಗೆ ಆ ದಾವೆಯ ಎಲ್ಲಾ ಪಕ್ಷಗಾರರು ಸಹಿ ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು-4 ಮೂಲ ದಾವೆ ಸಂಖೆ 20/2005 ರಲ್ಲಿ ದಾವಾ ಸ್ವತ್ತು ಇತ್ತು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ದಾವಾ ಸ್ವತ್ತು ನಮೂದು ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜಿ ಡಿಕ್ರಿಯ ಪ್ರಕಾರ ದಾವಾ ಸ್ವತ್ತು 4 ನಾಗರಾಜು ಇವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿ ಜಂಟಿಯಾಗಿ ನಮ್ಮನ್ನು ಬಿಟ್ಟು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು 4 ನಾಗರಾಜು ಇವರ ಪಾಲಿಗೆ ಬಂದಿದ್ದು ಅವರ ನಂತರ ಅವರ ಹೆಂಡತಿ ಮಕ್ಕಳ ಹೆಸರಿಗೆ ಜಂಟಿಯಾಗಿ ಬಂದಿರುತ್ತದೆ ಎಂದರೆ ಸಾಕ್ಷಿ ಅವರವರು ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. 13 ನೇ ಪ್ರತಿವಾದಿ ಕಡೆಯಿಂದ ಪ್ರತಿವಾದಿ 2 ರೂ 46 ಲಕ್ಷ ಹಾಗೂ ಪ್ರತಿವಾದಿ 3 ರವರು ರೂ 42 ಲಕ್ಷ ಹಣವನ್ನು ದಾವಾ ಸ್ವತ್ತು-4 ನ್ನು ಮಾರಾಟ ಮಾಡಿ ಹಣ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ನನ್ನನ್ನು ಬಿಟ್ಟು ಅವರು ಪಡೆದುಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. 13 ನೇ ಪ್ರತಿವಾದಿ ಗಾಯತ್ರಿ ಕೋಆಪರೇಟಿವ್ ಸೊಸೈಟಿಯಲ್ಲಿ ಸಾಲ ಮಾಡಿ ಸದರಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು 4 ನ್ನು ಖರೀದಿಸುವ ಕಾಲಕ್ಕೆ ಭೂ ಪರಿವರ್ತನೆ ಆಗಿತ್ತು ಎಂದರೆ ಸರಿ. ಸದರಿ 13 ನೇ ಪ್ರತಿವಾದಿ ದಾವಾ ಸ್ವತ್ತು 4 ಕ್ಕೆ ಸುಮಾರು 50 ಲಕ್ಕದಷ್ಟು ಹಣ ಖರ್ಚು ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರ ಆಸ್ತಿಗೆ ಅವರು ಹಣ ಖರ್ಚು ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ .

6. ಕ್ರಯ ಪತ್ರ ಮಾಡಿಕೊಳ್ಳುವ ಪೂರ್ದಲ್ಲಿ 13 ನೇ ಪ್ರತಿವಾದಿಯ ಜೊತೆ ಕ್ರಯದ ಕರಾರು ಪತ್ರ ಆಗಿರುತ್ತದೆ ಎಂದರೆ ಸರಿ. ದಿನಾಂಕ 15.04.1992 ರಂದು ತುಳಸಮ್ಮ ಇವರು ತಮ್ಮ ಜೀವಿತಾವಧಿಯಲ್ಲಿ ಜಿ.ಟಿ.ನಾಗರಾಜು ಇವರಿಗೆ ದಾವಾ ಸ್ವತ್ತು 4 ನ್ನು ವಿಲ್

ಮುಖಾಂತರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮೂಲ ದಾವೆ ಸಂಖ್ಯೆ 20/2005 ರಲ್ಲಿ ದಾವಾ ಸ್ವತ್ತು 4 ಜಿ.ಟಿ.ನಾಗರಾಜು ಈತನ ಭಾಗಕ್ಕೆ ರಾಜಿ ಅರ್ಜಿಯ ಪ್ರಕಾರ ಹೋಗಿರುತ್ತದೆ ಎಂದರೆ ಸರಿಯಲ್ಲ. ಸೀತಮ್ಮನ ಅಕ್ಕ ಸಾವಿತ್ರಮ್ಮ ಇರುತ್ತಾರೆ ಎಂದರೆ ಸರಿ. ಸೀತಮ್ಮ ಇವರು ಮೂಲ ದಾವೆ ಸಂಖ್ಯೆ 20/2005 ರಲ್ಲಿ ತುಳಸಮ್ಮ ಮತ್ತು ಸಾವಿತ್ರಮ್ಮ ಇವರಿಗೆ ಮಕ್ಕಳು ಇರುವುದಿಲ್ಲ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನನಗೂ ಮತ್ತು 1 ರಿಂದ 9 ನೇ ಪ್ರತಿವಾದಿಯರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾವಿತ್ರಮ್ಮ ಬದುಕಿದ್ದಾಗ ಅವರಿಗೆ ರೇಷನ್ ಕಾರ್ಡ್ ಇರಲಿಲ್ಲ ಆದರೆ ಚುನಾವಣಾ ಗುರುತಿನ ಚೀಟಿ ಇತ್ತು. ನಿಪಿ- 18 ನ್ನು ಈ ದಾವೆ ಹೂಡಿದ ನಂತರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಮ್ಮ ಜಗದೀಶ ಈತನು 7 ನೇ ತರಗತಿ ವ್ಯಾಸಂಗ ಮಾಡಿರುತ್ತಾರೆ. ಶಾಲಾ ದಾಖಲಾತಿಗಳಲ್ಲಿ ಸಾವಿತ್ರಮ್ಮನ ಹೆಸರು ನಮೂದು ಇರದ ಕಾರಣ ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಇವರ ತಂದೆಯ ಹೆಸರು ಮಾತ್ರ ಇರುತ್ತದೆ ಎಂದು ಉತ್ತರಿಸುತ್ತಾರೆ. ನನ್ನ ತಮ್ಮನ ಮರಣ ಪ್ರಮಾಣ ಪತ್ರದಲ್ಲಿ ಮನೆಯ ವಿಳಾಸ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಸ್ವಂತ ಮನೆಯಲ್ಲಿ ತೀರಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಪಿ- 21 ರಲ್ಲಿ ತಾಯಿಯ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯ ಹೆಸರು ಇರುತ್ತದೆ ಎಂದು ಉತ್ತರಿಸುತ್ತಾರೆ. ನನಗೆ 13 ನೇ ಪ್ರತಿವಾದಿ ಈ ನ್ಯಾಯಾಲಯಕ್ಕೆ ಬಂದ ಮೇಲೆ ಪರಿಚಯ ಇರುತ್ತಾರೆ. ಸದರಿಯವರು ನಿವೃತ್ತ ಬ್ಯಾಂಕ್ ನೌಕರರು ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ಮೋಸ ಮಾಡಿರುತ್ತಾರೆ ಎಂದು ನಾನು ಇಲ್ಲಿಯವರೆಗೂ ಯಾವುದೇ ದೂರನ್ನು ಹಾಗೂ ಖಾಸಗಿ ಪಿರ್ಯಾದನ್ನು ನೀಡಿರುವುದಿಲ್ಲ.

7. ದಾವಾ ಸ್ವತ್ತು 4 ರ ಆಸ್ತಿ 13 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. 1995 ರಿಂದ ಇಲ್ಲಿಯವರೆಗೆ ಯಾವ ಕಾರಣಕ್ಕಾಗಿ ಆಸ್ತಿಯ ಮೇಲೆ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಅಣ್ಣ ಜಿ ಟಿ ನಾಗರಾಜು ನೋಡಿಕೊಳ್ಳುತ್ತಿದ್ದ ಎಂದು ಉತ್ತರಿಸುತ್ತಾರೆ. ನಾನು ದಾವೆಯಲ್ಲಿ ನಾಗರಾಜು ಈತನ ಆಸ್ತಿಯನ್ನು ನೋಡಿಕೊಳ್ಳುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ನಾನು ದಾವಾ

ಆಸ್ತಿಗಳಲ್ಲಿ 1/3 ನೇ ಹಕ್ಕು ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಒಟ್ಟು ದಾವಾ ಆಸ್ತಿಗಳ ವಿಸ್ತೀರ್ಣ 21 ಎಕರೆ ಇರುತ್ತದೆ ಎಂದರೆ ಸರಿ. ನಾನು ಈ ದಾವೆಯಲ್ಲಿ ತುಳಸಮ್ಮನವರ ಆಸ್ತಿಯಲ್ಲಿ 1/3 ನೇ ಭಾಗ ಬರಬೇಕು ಎಂದು ಕೇಳಿರುತ್ತೇನೆ. ನಾನು 13 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಅನಾವಶ್ಯಕ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 9 ರವರ ಮುಖಾಂತರ ದಾವಾ ಸ್ವತ್ತು 4 ನ್ನು 13 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಸರಿ. 13 ನೇ ಪ್ರತಿವಾದಿ ದಾವಾ ಸ್ವತ್ತು 4 ನ್ನು ಖರೀದಿಸುವ ಪೂರ್ವದಲ್ಲಿ ವಕೀಲರ ಕಾನೂನು ಅಭಿಪ್ರಯ ಪಡೆದು ಹಾಗೂ ದಾಖಲೆಗಳನ್ನು ಪರಿಶೀಲಿಸಿ ಸದ್ಭಾವನಾ ಖರೀದಿದಾರರು ಇರುತ್ತಾರೆ ಎಂದರೆ ಸರಿಯಲ್ಲ. ಕಾನೂನು ಅಭಿಪ್ರಾಯದ ಪ್ರಕಾರ ತುಳಸಮ್ಮ ಮತ್ತು ಸಾವಿತ್ರಮ್ಮ ಇವರಿಗೆ ಮಕ್ಕಳಿಲ್ಲದ ಕಾರಣ ಮೀನಾಕ್ಷಮ್ಮ ಮತ್ತು ಸೀತಮ್ಮ ಇವರ ಮಕ್ಕಳ ಮುಖಾಂತರ 13 ನೇ ಪ್ರತಿವಾದಿ ದಾವಾ ಸ್ವತ್ತು 4 ನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. 2020 ರಲ್ಲಿ ನನಗೆ 2 ನೇ ಪ್ರತಿವಾದಿ ಫೋನ್ ಮಾಡಿ ನನ್ನದು ಹಕ್ಕು ಖುಲಾಸೆ ಪತ್ರಕೆ ಸಹಿ ಬೇಕು ಎಂದು ಹೇಳಿರುತ್ತಾರೆ. ನಂತರ ಒಂದು ವಾರದ ನಂತರ ನನ್ನ ಮಗನಿಗೆ ಫೋನ್ ಬಂದಿರುತ್ತದೆ. ನನಗೆ ಯಾವುದೇ ಫೋನ್ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದ ಪತ್ರದ ಪ್ಯಾರ ನಂಬರ್ 31 ರಲ್ಲಿ ಬರೆದಿರುವ ವಿಚಾರ ಸತ್ಯವಾಗಿರುತ್ತದೆ. ನಾನು ವ್ಯಾಜ್ಯ ಕಾರಣ ತೋರಿಸಿರುವುದರಲ್ಲಿ 13 ನೇ ಪ್ರತಿವಾದಿಯ ವಿರುದ್ಧ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯ ಪತ್ರವನ್ನು ರದ್ದತಿ ಕೋರದೆ ಈ ದಾವೆ ಕಾನೂನಿನ ಅಡಿಯಲ್ಲಿ ವ್ಯಾಜ್ಯ ಆಗುವುದಿಲ್ಲ ಎಂದರೆ ಸರಿಯಲ್ಲ. ಮೂಲ ದಾವೆ ಸಂಖ್ಯೆ 20/2005 ರ ರಾಜಿ ಅರ್ಜಿಯಲ್ಲಿ ನಾನು ಪ್ರಶ್ನೆ ಮಾಡಿರುವುದಿಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 13 ನೇ ಪ್ರತಿವಾದಿಯಿಂದ ಹಣ ಪಡೆಯುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಮೇಲ್ಮನವಿ ಎ ಸಿ ಕಛೇರಿಯಲ್ಲಿ ಮುಂದೆ ವಜಾ ಆಗಿರುತ್ತದೆ ಎಂ ದರೆ ಸಾಕ್ಷಿ ನಾವು ಡಿ ಸಿ ಯವರ ಮುಂದೆ ಮೇಲ್ಮನವಿ ಸಲ್ಲಿಸಬೇಕಿತ್ತು ಎಂದು ಉತ್ತರಿಸುತ್ತಾರೆ. ನಾನು ಆಸ್ತಿಯನ್ನು ಕಬಳಿಸುವ ಸಲುವಾಗಿ ಸಾವಿತ್ರಮ್ಮನವರ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ 5 ರ ಪರ ವಕೀಲರ ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲುಃ ಪ್ರತಿವಾದಿ 2,3,7,9 ಪರ ವಕೀಲರನ್ನು ಕೂಗಿ ಕರೆಸಲಾಗಿ ಅವರು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 1,4 ಮತ್ತು 8 ರವರು ಏಕ ಪಕ್ಷೀಯ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 11 ಮತ್ತು 11 ರ ಪರ ವಕೀಲರನ್ನು ಕೂಗಿ ಕರೆಸಲಾಗಿ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ